**ಮೂ.ದಾ.ನಂ. 66/2018**

ಪಿ.ಡಬ್ಲ್ಯು.1

(ಇಂದು ದಿನಾಂಕ: **17-12-2024** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ.ವಾಯ್.ವಿ.ಎಸ್. ವಕೀಲರಿಂದಃ**

ಸಾಕ್ಷಿಗೆ ನಿ.ಡಿ.5 ನ್ನು ತೋರಿಸಲಾಗಿ, ಸಾಕ್ಷಿಯು ನಿ.ಡಿ.5 ರಲ್ಲಿ ಇರುವ ವಿಷಯಗಳು ಸರಿಯಾಗಿ ಕಾಣದೇ ಇರುವುದರಿಂದ ಸಾಕ್ಷಿಗೆ ಈಗ ತೋರಿಸಲಾದ ಭಾವಚಿತ್ರದ ವಿಷಯ ಹಾಗೂ ನಿ.ಡಿ.5 ರ ವಿಷಯ ಒಂದೇ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ನೋಡಿ ಗುರುತಿಸಿದ ಭಾವಚಿತ್ರವನ್ನು ನಿ.ಡಿ.5ಎ ಎಂದು ಗುರುತಿಸಲಾಯಿತು. ನಿ.ಡಿ.5ಎ ದಲ್ಲಿ ಕಾಣುವ ರಸ್ತೆಯ ಪಕ್ಕದ ಗುಡ್ಡ ಹಾಗೂ ಚಿತ್ರಗಿ ಕಲ್ಲು ಗುಡ್ಡೆಯ ರಸ್ತೆ ಸಾಕ್ಷಿಗೆ ಈಗ ತೋರಿಸಿದ ಭಾವಚಿತ್ರದಲ್ಲಿ ಕಾಣುವುದಾಗಿ ಒಪ್ಪಿಕೊಂಡಿದ್ದ ಮೇರೆಗೆ ಸದ್ರಿ ಭಾವಚಿತ್ರವನ್ನು ನಿ.ಡಿ.6 ಎಂದು ಗುರುತಿಸಲಾಯಿತು.

ಸರ್ವೆ ನಂ. 49 ರ ಪೂರ್ವದ ಗಡಿಯು ನನ್ನ ಜಾಗಕ್ಕೆ ತಾಗಿಕೊಂಡಿದೆ. ನಾನು ಖರೀದಿ ಮಾಡಿದ ಪೂರ್ವದಲ್ಲಿ ನಿ.ಡಿ.5 ಹಾಗೂ 5ಎ ದಲ್ಲಿರುವ ವಸ್ತು ಸ್ಥಿತಿ ಇತ್ತು. ನಾನು ನನ್ನ ಜಾಗವನ್ನು ಖರೀದಿ ಮಾಡುವ ಪೂರ್ವದಲ್ಲಿ ಅದರ ಮಾಲೀಕರಿಂದ ಅರ್ಜಿ ಕೊಡಿಸಿ ನಾನು ಖರೀದಿ ಮಾಡುವ ಜಾಗದ ಸರ್ವೆಯನ್ನು ಮಾಡಿಸಿ, ಗಡಿ ನಿರ್ದಿಷ್ಟಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಾನು ಸದ್ರಿ ಖರೀದಿ ಮಾಡುವ ಪೂರ್ವದಲ್ಲಿ ಸದ್ರಿ ಜಾಗವು ಬಿನ್ ಶೇತ್ಕಿ ಆಗಿತ್ತು ಎಂದು ನುಡಿಯುತ್ತಾರೆ.

**ಮೂ.ದಾ.ನಂ. 66/2018**

ಪಿ.ಡಬ್ಲ್ಯು.1

ನಾನು ಸಾಗುವಳಿ ಮಾಡುತ್ತೇನೆ ಎಂದು ಹೇಳುವಂತಹ ಸರ್ವೆ ನಂ. 58 ಹಿಸ್ಸಾ 1 ಅ ದ ಪೂರ್ತಿ 7 ಗುಂಟೆ 8 ಆಣೆಯ ಜಾಗದಲ್ಲಿ ಸಾಗುವಳಿ ಮಾಡುತ್ತಿದ್ದೇನೆ. ಸಾಕ್ಷಿಯು ಸದ್ರಿ ಸಾಗುವಳಿಯನ್ನು ನಾವು ಹಾಗೂ ಆಳುಗಳು ಮಾಡುತ್ತೇವೆ ಎಂದು ನುಡಿಯುತ್ತಾರೆ. ನಮಗೆ ಉಳುವೆಯ ಸಮಯದಲ್ಲಿ ಜನ ಸಿಕ್ಕರೆ ನಾವು ಜನಗಳ ಮುಖಾಂತರ ಎತ್ತು ಹಾಕಿ ಉಳುತ್ತೇವೆ ಇಲ್ಲದೇ ಇದ್ದರೇ ಟ್ರಾಕ್ಟರ್ ನ ಮುಖಾಂತರ ಉಳುಮೆ ಮಾಡುತ್ತೇವೆ. ನಾನು ಉಳುಮೆಗಾಗಿ ಎತ್ತು ಹಾಗೂ ಟ್ರಾಕ್ಟರಗಳನ್ನು ಭಾಡಿಗೆಗೆ ತೆಗೆದುಕೊಂಡು ಬರುತ್ತೇವೆ. ಈ ವರ್ಷದ ಸಾಗುವಳಿ ಆಳುಗಳು ಯಾರು ಎಂದು ನನಗೆ ಗೊತ್ತಿಲ್ಲ. ನಾನು ಕೋಣಗಳನ್ನು ತರಿಸಿ ಯಾವುದೇ ಸಾಗುವಳಿಯನ್ನು ಮಾಡಿರುವುದಿಲ್ಲ.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ಸದ್ರಿ ಭಾವಚಿತ್ರದಲ್ಲಿ ಎರಡು ಕೋಣಗಳು ಕಂಡು ಬರುತ್ತವೆ ಎಂದರೆ ಸರಿ. ಸಾಕ್ಷಿಯು ಸದ್ರಿ ಭಾವಚಿತ್ರದಲ್ಲಿರುವ ವಸ್ತು ಸ್ಥಿತಿಯನ್ನು ಒಪ್ಪಿಕೊಂಡ ಮೇರೆಗೆ ಅದನ್ನು **ನಿ.ಡಿ.7 ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ಸದ್ರಿ ಭಾವಚಿತ್ರದಲ್ಲಿ 1ನೇ ಪ್ರತಿವಾದಿಯು ಎರಡು ಕೋಣಗಳನ್ನು ಇಟ್ಟುಕೊಂಡು ಉಳುಮೆ ಮಾಡುತ್ತಿರುವುದು ಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿಯು ಸದ್ರಿ ಭಾವಚಿತ್ರದಲ್ಲಿರುವ ವಸ್ತು ಸ್ಥಿತಿಯನ್ನು ಒಪ್ಪಿಕೊಂಡ ಮೇರೆಗೆ ಅದನ್ನು **ನಿ.ಡಿ.8 ಎಂದು** ಗುರುತಿಸಲಾಯಿತು.

**ಮೂ.ದಾ.ನಂ. 66/2018**

ಪಿ.ಡಬ್ಲ್ಯು.1

ಪ್ರತಿವಾದಿಗಳಿಗೆ ಹಕ್ಕುಬಂದ್ ಲಗಾಯತ್ತು ಸದ್ರಿ ಎರಡೂ ಗದ್ದೆಗಳನ್ನು ಪ್ರತಿವಾದಿಗಳೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಖರೀದಿಯ ಪೂರ್ವದಲ್ಲಿ ಮಾಡಿರಬಹುದು ಎಂದು ನುಡಿಯುತ್ತಾರೆ. ನಾನು ಸಾಗುವಳಿ ಮಾಡುವ ಪೂರ್ವದಲ್ಲಿ ಜಿಲ್ಲಾಧಿಕಾರಿಗಳಿಂದ ಪರವಾನಿಗೆ ಪಡೆದಿರುವುದಿಲ್ಲ.

ನಿ.ಪಿ.6 ರಲ್ಲಿರುವ 2ನೇ ಷರತ್ತಿನ ಕುರಿತಾಗಿ ನಾನು ಸಾಗುವಳಿ ಮಾಡಲು ಜಿಲ್ಲಾಧಿಕಾರಿಗಳ ಪೂರ್ವಾನುಮತಿ ಪಡೆದಿರುವುದಿಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ